**<u>ದಿನಾಂಕಃ 18-08-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ ಅರ್ಜಿದಾರರ ಪರ ವಕೀಲರಾದ ಶ್ರೀ ಎಂ.ಎಸ್.ಬಿ. ವಕೀಲರಿಂದಃ</u>**

ದಾವಣಗೆರೆ ಜಿಲ್ಲೆ ಮತ್ತು ತಾಲ್ಲೂಕಿನ ಸಿದ್ದನೂರು ಗ್ರಾಮದ ನಿವಾಸಿಯಾದ ರಾಜು.ಎಸ್.ಆರ್ ಬಿನ್ ರಾಮಚಂದ್ರಪ್ಪ ರವರು ನಮ್ಮ ಕಚೇರಿಯಿಂದ ಮಾಸಿಕ ಅಂಗವಿಕಲ ಮಾಶಾಸನವನ್ನು ಪಡೆದು ಕೊಳ್ಳುತ್ತಿರಲಿಲ್ಲ.

**<u>ಪಾಟೀ ಸವಾಲುಃ</u>** 1 ನೇ ಎದುರುದಾರರ ಪರ ವಕೀಲರಾದ ಶ್ರೀ ಎಂ.ಎಂ.ಎಲ್ ವಕೀಲರನ್ನು ಪಾಟೀ ಸವಾಲು ಇಲ್ಲಾ ಎಂದು ನುಡಿದಿರುವ ಕಾರಣಕ್ಕಾಗಿ ಪಾಟೀ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು .

**<u>ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಎಸ್.ಎಸ್.ಕೆ.ವಕೀಲರಿಂದಃ</u>**

ದಿಃ 06-07-2023 ರಂದು ನಾನು ಈ ಅರ್ಜಿಗೆ ಸಂಬಂಧಿಸಿದಂತೆ ಇದೇ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಿದ್ದೇನೆ ಎಂದರೆ

ಸರಿ. ಸದರಿ ದಿನದಂದು ಮಧ್ಯಂತರ ಅರ್ಜಿ ಸಂಖೆ.09 ರ ಆದೇಶದ ಮೇರೆಗೆ ನಾನು ನ್ಯಾಯಾಲಯಕ್ಕೆ ನಿ.ಆರ್–9 ರ ದಾಖಲೆಯನ್ನು ಹಾಜರು ಪಡಿಸಿದ್ದೇನೆ ಎಂದರೆ ಸರಿ. ಸದರಿ ನಿ.ಆರ್–9 ರ ದಾಖಲಾತಿಯ ಆಧಾರದ ಮೇರೆಗೆ ದಿಃ 06–07–2023 ರಂದು ನಾನು ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿ. ನಾನು ಸದರಿ ದಿನಂದು ನ್ಯಾಯಾಲಯಕ್ಕೆ ನಿ.ಆರ್–9 (ದಾವಣಗೆರೆ ತಾಲ್ಲೂಕಿನ ಗ್ರೇಡ್ –02 ತಹಶೀಲ್ದಾರ ರವರು ನ್ಯಾಯಾಲಯಕ್ಕೆ ಸಲ್ಲಿಸಿರುವ ಪತ್ರ) ರಲ್ಲಿ " ಉಲ್ಲೇಖ (3) ರಲ್ಲಿ ಗ್ರಾಮ ಆಡಳಿತ ಅಧಿಕಾರಿ ರವರು ಮೃತರ ವಾರಸುದಾರರು ಮೃತರು ಅಂಗವಿಕಲ ವೇತನವನ್ನು ಈ ಹಿಂದೆ ಪಡೆಯುತ್ತಿದ್ದು, ಚಿಕಿತ್ಸೆಯ ನಂತರ ಗುಣಮುಖರಾಗಿದ್ದರಿಂದ ನಂತರ ವೇತನವನ್ನು ರದ್ದು ಮಾಡಿರುವುದಾಗಿ ತಿಳಿಸಿರುತ್ತಾರೆ " ಎಂದು ನಮೂದಿಸಿರುವ ವಿಷಯವನ್ನು ಯಾವ ಆಧಾರದ ಮೇರೆಗೆ ಸದರಿ ನಿ.ಆರ್–9 ರಲ್ಲಿ ಉಲ್ಲೇಖಿಸಿದ್ದೀರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ತಮ್ಮ ಕಚೇರಿಯ ಗ್ರಾಮ ಮಹಜರ್ (ಸಿಸ್ಟಂ) ನಲ್ಲಿ ಅಳವಡಿಸಿರುವ ವಿಷಯದ ಆಧಾರದ ಮೇರೆಗೆ ಸದರಿ ವಿಷಯವನ್ನು ನಿ.ಆರ್–9 ರಲ್ಲಿ

ಉಲ್ಲೇಖಿಸಲಾಗಿದೆ ಎಂದು ನುಡಿಯುತ್ತಾರೆ . ಸದರಿ ಗ್ರಾಮ ಮಹಜರ್ ನ ವಿಷಯವನ್ನು ನಮ್ಮ ಕಚೇರಿಯ ಸಿಬ್ಬಂದಿಯವರು ಪೇಪರನಲ್ಲಿ ಬರೆದು ಕೊಂಡು ಬಂದಿರುತ್ತಾರೆ . ಸದರಿ ಗ್ರಾಮ ಮಹಜರ್ ಮಾಡುವ ಸಮಯದಲ್ಲಿ ಯಾವ ವ್ಯಕ್ತಿ (ಹೆಸರು ಮತ್ತು ವಿಳಾಸ) ಸದರಿ ಮಾಹಿತಿಯನ್ನು ನೀಡಿದ್ದಾರೆ ಎನ್ನುವ ಬಗ್ಗೆ ಮತ್ತು ಸದರಿ ಮಾಹಿತಿಯನ್ನು ಯಾರ ಸಮಕ್ಷಮ (ಸಾಕ್ಷಿದಾರರ ಹೆಸರು ಮತ್ತು ವಿಳಾಸ) ನೀಡಿದ್ದಾರೆ ಎನ್ನುವ ಬಗ್ಗೆ ದಾಖಲಾತಿಗಳು ಇವೆ. ಸದರಿ ಗ್ರಾಮ ಮಹಜರ್ ನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ನನಗೆ ಏನು ತೊಂದರೆ ಇರುವುದಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಬೇಡಿರುವುದರಿಂದ ಮುಂದೂಡಲಾಗಿದೆ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

sd/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ ರಾಣೇಬೆನ್ನೂರು.